
ಜಾರಿದರು. ಕೋಳಿ ನಿದ್ರೆಯಾಗಿ ಎದ್ದು ಸಮಯ ನೋಡಿದಾಗ ಹನ್ನೊಂದು ಗಂಟೆಗೆ ಐದೇ ನಿಮಿಷ ಬಾಕಿಯಿತ್ತು. ಲುಂಗಿಯನ್ನು ಸರಿ ಮಾಡಿಕೊಳ್ಳುತ್ತಾ ಕೆಳಗೆ ಹೋಗಿ ನೋಡಿದರೆ ಯಾವ ವರದಿಗಾರರೂ ಬಂದಿರಲಿಲ್ಲ.

'ಪರಮೇಶಿ, ಇದೇನ್ರಿ ಇವರಿಗೆ ಟೈಂ ಸೆನ್ಸ್ ಇಲ್ಲ' ಎಂದು ಕೂಗಾಡತೊಡಗಿದರು.

'ಚಾನೆಲ್‌ಗೆ ಫೋನ್ ಮಾಡಿದ್ದೆ ಸರ್. ಹೊರಟಿದ್ದಾರಂತೆ' ಎಂದು ಹೇಳಿ ಮುಗಿಸುವಷ್ಟರಲ್ಲಿ ಹೊಂಡಾ ಆಕ್ಟಿವಾವೊಂದು ಗೇಟಿನಿಂದ ಒಳಗೆ ಬಂದಿದ್ದು ಕಾಣಿಸಿತು. ಬಂದಿದ್ದು ವರದಿಗಾರನಾಗಿರದೆ ವರದಿಗಾರ್ತಿಯಾಗಿದ್ದಳು. 'ಒಬ್ಬ ವರದಿಗಾರ ಬರಲು ಭಯವಾಗಿ ಜೊತೆಗೆ ಇನ್ನೊಬ್ಬರನ್ನು ಕರೆತರುತ್ತಾನೆ' ಎಂಬ ನಾಯಕ್ ಅವರ ಕಲ್ಪನೆ ಬುಡಮೇಲಾಗಿತ್ತು. 'ಪೊಲಿಟಿಕಲ್ ರಿಪೋರ್ಟರ್, ಅದೂ ಹುಡುಗಿ' ಎಂದು ಹುಬ್ಬೇರಿಸುವಂತಾಯಿತು.

ವರದಿಗಾರ್ತಿ ಒಳ ಬರುತ್ತಿದ್ದಂತೆ, ಸಚಿವರು ಆಕೆಯ ಮುಖ ನೋಡುವ ಬದಲು ಕೈ ಕಡೆ ನೋಡಿದರು. ಡೈರಿ ಕಾಣಲಿಲ್ಲ. ಬ್ಯಾಗ್ ತಂದಿರಬಹುದಾ ಎಂದು ನೋಡಿದರು. ಬ್ಯಾಗ್ ಕೂಡ ತಂದಿರಲಿಲ್ಲ. ಸಚಿವರಿಗೆ ಪಿತ್ತ ನೆತ್ತಿಗೇರಿದಂತಾಯಿತು. ಏನು ಹೇಳಬೇಕೆಂದು ಗೊಂದಲದಲ್ಲಿರುವಾಗಲೇ, 'ಹಲೋ ಸರ್, ಐ ಆ್ಯಮ್ ಆನ್ ಟೈಮ್' ಎಂದು ಮುಗುಳ್ನಕ್ಕಳು. ಮುಖ ದಿಟ್ಟಿಸಿದರು. ಆ ಚಹರೆ ಎಲ್ಲೋ ನೋಡಿರುವಂತೆನಿಸುತ್ತಿತ್ತು. ಎಲ್ಲಿ ಗೊತ್ತಾಗಲಿಲ್ಲ.



'ಏನಮ್ಮಾ 10.30ಕ್ಕೆ ಅಪಾಯಿಂಟ್ಮೆಂಟ್ ಅಲ್ವೆ?' ನಾಯಕ್ ಸಿಡಿಮಿಡಿಯಾದರು.

'ನೀವು ಯಾವತ್ತೂ ಅರ್ಧ ಗಂಟೆ ಲೇಟಲ್ವ ಸರ್? ಸುಮ್ನೆ ನನ್ನ ಅರ್ಧ ಗಂಟೆ ಯಾಕ್ ವೇಸ್ಟ್ ಮಾಡೋದು ಅಂತ ಶಾರ್ಪ್ 11ಕ್ಕೆ ಬಂದೆ' ವರದಿಗಾರ್ತಿ ಮೃದುವಾಗಿಯೇ ಹೇಳಿದಳು.

'ನಮಗೆ ನೂರಾರು ಕೆಲಸ ಇರ್ತವೆ. ಅದಕ್ಕೆ ಸಮಯ ಹೆಚ್ಚು ಕಮ್ಮಿ ಆಗತ್ತೆ. ಹಾಗಂತ ನೀವ್ ತಡ ಮಾಡಿದ್ರೆ ಹೇಗೆ?'

'ಸ್ಸಾರಿ ಸರ್, ನಿಮ್ ಬಗ್ಗೆ ನನ್ನ ಒಬ್ಸರ್ವೇಷನ್ ತಪ್ಪಾಗಿರಬಹುದು'

'ಮನುಷ್ಯ, ಸಮಯ, ಸಂದರ್ಭ ನಿನ್ನೆ ಇದ್ದಂಗೆ ಇವತ್ತು ಇರೋದಿಲ್ಲ. ಇದು ಗೊತ್ತಿಲ್ವ ನಿಂಗೆ?'

ಸಚಿವರು ಗರಂ ಆಗಿದ್ದನ್ನು ಗಮನಿಸಿದ ಪಿ.ಎ ಪರಮೇಶಿ ಮಧ್ಯೆ ಬಾಯಿ ಹಾಕಿ, 'ಚಾನೆಲ್ ಗೆ ಹೊಸಬ್ರೇನ್ರಿ? ಈ ತಂಕ ಮುಖ ನೋಡಿಲ್ಲ ಎಂದ.

ನಾಯಕ್ ಅವರಿಗೆ ಪಿ.ಎ. ಸೂಚನೆ ಅರ್ಥವಾದಂತಾಗಿ, 'ನೀವ್ ಹೊರಗಿರಿ ಪರಮೇಶಿ. ನಾನ್ ಮಾತಾಡ್ತೀನಿ. ಹಾಗೆ ಎರಡು ಜ್ಯೂಸ್ ಹೇಳ್ಬಿಡಿ' ಎಂದು ನಾಯಕ್ ಪಿ.ಎ.ಗೆ ಕಣ್ಸನ್ನೆ ಮಾಡಿದರು.

'ಪೊಲಿಟಿಕಲ್ ರಿಪೋರ್ಟಿಂಗ್ ಹೊಸತೇನಮ್ಮಾ?'

'ಹೌದು ಸರ್, ಈಗ 4 ತಿಂಗಳಾಯ್ತು ಸೇರಿ.'

'ಅದೆ ಅನ್ಕೊಂಡೆ, ಈ ತಂಕ ನೋಡಿಲ್ವಲ್ಲ ಅಂತ' ನಾಯಕ್ ಬೇಕಂತಲೇ ಹೇಳಿದರು.

'ನಾನು ನೋಡಿದ್ದೆ ಸರ್, ಆಪರೇಷನ್ ಟೈಮ್‌ನಲ್ಲಿ. ನೀವು ರೆಸಾರ್ಟ್ ಓಡಾಟದಲ್ಲಿ ಬ್ಯುಸಿ ಆಗಿದ್ರಿ.'

'ಓಹ್, ಅದು ಬಿಡು. ಮತ್ತೇನದು ಡೈರಿ ವಿಚಾರ?'

'ಅದು ಡೈರಿ ವಿಚಾರ ಅಲ್ಲ ಸರ್, ಪಕ್ಷಾಂತರದ ವಿಚಾರ. ಅಲ್ಲಾ, ಸಮ್ಮಿಶ್ರ ಸರ್ಕಾರ ಕೆಡವಿ ಪಕ್ಷಾಂತರ ಮಾಡುವಂತಹದ್ದು ಏನಿತ್ತು?'

ತುಂಬಾ ನೇರವಾಗಿ ಮಾತನಾಡ್ತಾಳೆ ಎಂದು ಅನಿಸಿತು. ಪತ್ರಕರ್ತೆ ಬೇರೆ, ತಾನು ಯದ್ವಾತದ್ವಾ ಮಾತಾಡಬಾರದು ಎಂದು ಮನಸಲ್ಲೇ ಲೆಕ್ಕಾಚಾರ ಹಾಕಿದ ನಾಯಕ್, ರಾಜಕೀಯ ಬುದ್ಧಿಯಿಂದ ಪರೋಕ್ಷ ಉತ್ತರ ಕೊಡುವ ಹಾದಿಗೆ ಸರಿದರು.

'ಈಗ ನೋಡಿ ರಿಪೋರ್ಟರ್‌ಗೆ ನ್ಯೂಸ್ ಹೆಡ್ ಆಗ್ಬೇಕು, ಆ್ಯಂಕರ್ ಆಗ್ಬೇಕು, ಚಾನೆಲ್ ಹೆಡ್ ಆಗ್ಬೇಕು. ಹೀಗೆ ಕನಸಿರತ್ತೆ ಅಲ್ವೇನ್ರಿ? ಸ್ವಲ್ಪ ದಿನದಲ್ಲೇ ಈಗಿದ್ದ ಕೆಲಸ ಹೋಗತ್ತೆ ಅಂದ್ರೆ ನೀವೇನ್ ಮಾಡ್ತೀರಾ?'

'ಸಚಿವರೆಲ್ಲ ಹೇಳ್ತಿದ್ರು, ಶಾಸಕರಾಗಿದ್ದಾಗಲೆ ರಂಗಾರೆಡ್ಡಿ ಅವರು ನಿಮ್ಮನ್ನು ಸಚಿವರಿಗಿಂತ ಮೇಲಾಗಿ ಕಾಣ್ತಿದ್ರಂತೆ. ಪಕ್ಷದಲ್ಲಿ ನೀವು ಹೇಳಿದ್ದು ನಡೀತಿತ್ತಂತೆ?'

'ಆಫೀಸಲ್ಲಿ ನಿಮ್ದು ಯಾವ್ದೊ ಒಂದಿಷ್ಟು ಸಜೆಷನ್ ಅಕ್ಸೆಪ್ಟ್ ಮಾಡ್ಕೊಂಡಿದ್ದಕ್ಕೆ ನೀವು ಆಫೀಸ್ ಬಾಸ್ ಆಗಲ್ಲ ಅಲ್ವ?'

'ನಮ್ಮದು ವೈಯಕ್ತಿಕ ನಿರ್ಧಾರ ಸರ್. ನೀವು ಜನರಿಂದ ಆಯ್ಕೆಗೊಂಡವರಲ್ವಾ? ಜವಾಬ್ದಾರಿಗಳು ಬೇರೆ ಬೇರೆ

'ನೀವು ಸಮಾಜ ಸೇವೆ, ಸಾಮಾಜಿಕ ನ್ಯಾಯ, ಜನರಿಗೇನೊ ಒಳ್ಳೇದು ಮಾಡ್ತೀವಿ ಅಂತ ವೈಯಕ್ತಿಕ ಬದುಕಿಗೂ ಲೆಕ್ಕ ಕೊಡ್ದೆ ನಿಮ್ಮ ಲಾಭಕ್ಕೆ ಸುದ್ದಿ ಹಾಕಲ್ವೇನ್ರಿ? ಈಗ ನೀವು ಮಾಡ್ದ ಹಾಗೆ.'

'ಆಯ್ತು, ನಿಮ್ಮ ವೈಯಕ್ತಿಕ ಬದುಕಿನ ಸುದ್ದಿ ಬಿಟ್ಟು, ಸಾರ್ವಜನಿಕ ಜೀವನದಲ್ಲಿ ನೀವು ಮಾಡಿದ ಭ್ರಷ್ಟಾಚಾರದ ಬಗ್ಗೆಯಷ್ಟೇ ಸುದ್ದಿ ಮಾಡಿದ್ರೆ ಪರ್ವಾಗಿಲ್ಲ ಅಲ್ವಾ?' ರಂಗಾ ನಾಯಕ್ ಧ್ವನಿಯಲ್ಲಿನ ಗಡಸುತನಕ್ಕೆ ಚೂರೂ ಅದುರದೆ ಕಣ್ಣಲ್ಲಿ ಕಣ್ಣು ನೆಟ್ಟೇ ಕೇಳಿದಳು.

ರಂಗಾ ನಾಯಕ್‌ಗೆ ಏನು ಹೇಳಬೇಕು ತೋಚಲಿಲ್ಲ. 'ಅಬ್ಬಾ! ಹುಡುಗಿಯೇ' ಎಂದು ಮನಸಲ್ಲೇ ಉದ್ಘರಿಸಿದರು. ಹಾಗೆಯೇ ಅವಳ ದೃಷ್ಟಿತಪ್ಪಿಸಿ ಗೋಡೆಯ ಮೇಲಿನ ಯಾವುದೋ ಫೋಟೊ ನೋಡುತ್ತ, 'ನೋಡಮ್ಮಾ, ವಾದ ಮಾಡಿದಷ್ಟೂ ಮುಂದುವರಿತಾನೇ ಹೋಗತ್ತೆ. ಈಗ ನನ್ನಿಂದ ಏನು ನಿರೀಕ್ಷೆ ಮಾಡ್ತೀಯಾ ಹೇಳು. ಈಗಿನ್ನೂ ಪ್ರೊಫೆಷನ್ ಶುರುಮಾಡಿದೀಯಾ. ನಿಂಗೆ ಒಳ್ಳೆದಾಗತ್ತೆ... ಮುಗ್ಸು ಇದನ್ನ ಇಲ್ಲಿಗೇ. ಏನ್ ನಿರೀಕ್ಷೆ ಮಾಡ್ತೀಯಾ ಹೇಳು' ಎಂದರು. ಅವರ ಮಾತಿನ ಕೊನೆಯಕ್ಷರಕ್ಕೆ ತಪರಾಕಿ ಹೊಡೆದಂತೆ ಉತ್ತರ ಬಂತು, 'ಏನೂ ಇಲ್ಲ'.

ರಂಗಾ ನಾಯಕ್ ದಿಗ್ಮೂಢರಾಗಿ ಕೂತುಬಿಟ್ಟರು. 'ಜ್ಯೂಸ್ ತರಲು ಹೇಳಿದ್ದೆನಲ್ಲ, ಪರಮೇಶಿ ಎಲ್ಲಿಗೆ ಹೋದ' ಎಂದು ಕೂತಲ್ಲೇ ಚಡಪಡಿಸತೊಡಗಿದರು. ಈ ಹುಡುಗಿಯ ಎದುರು ಕೂತ ಒಂದೊಂದು ಕ್ಷಣವೂ ಮುಳ್ಳಿನ ಹಾಸಿಗೆಯಲ್ಲಿ ಹೊರಳಾಡಿದಂತೆ ಭಾಸವಾಗುತ್ತಿತ್ತು. ಪರಮೇಶಿ ಬರಲಿಲ್ಲ.

ವರದಿಗಾರ್ತಿ ಮೆಲ್ಲ ಮೇಲೆದ್ದಳು. ರಂಗಾ ನಾಯಕ್ ಎದುರಿಗೆ ಯಾವ ಸಂಕೋಚವೂ ಇಲ್ಲದೆ ತನ್ನ ಟಾಪ್ ತುಸು ಎತ್ತಿ ಬೆನ್ನ ಹಿಂದೆ ಕೈ ಹಾಕಿ ಡೈರಿ ತೆಗೆದಳು. ಡೈರಿ ನೋಡಿದ್ದೇ ರಂಗಾ ನಾಯಕ್ ಉದ್ವೇಗದಿಂದ ನಡುಗತೊಡಗಿದರು. ಡೈರಿ ಕೊಡುವುದಿಲ್ಲ ಎಂದರೆ ಏನು ಮಾಡಬಹುದು? ಬಲವಂತದಿಂದ ತೆಗೆದುಕೊಂಡರೆ ರಿಸ್ಕ್ ಆಗಬಹುದೇ? ಹುಡುಗಿ ಬೇರೆ, ಹೇಗೆ ಹ್ಯಾಂಡಲ್ ಮಾಡುವುದು? ಎಂದೆಲ್ಲ ಅವರ ತಲೆ ನೂರು ದಾರಿಗಳಲ್ಲಿ ದಿಕ್ಕೆಟ್ಟು ಓಡುತ್ತಿದ್ದ ಹಾಗೆ, ವರದಿಗಾರ್ತಿ ಡೈರಿಯನ್ನು ಅವರ ಮುಂದಿಟ್ಟಳು. ರಂಗಾ ನಾಯಕ್ ಬೆರಗಿನಿಂದ ಅವಳನ್ನೇ ನೋಡತೊಡಗಿದರು. ವರದಿಗಾರ್ತಿ ತುಸುವೇ ನಕ್ಕಳು. ರಂಗಾ ನಾಯಕ್ ಮುಖದಲ್ಲಿಯೂ ಮೆಲ್ಲನೇ ಗೆಲುವಿನ ನಗು ಮೂಡತೊಡಗಿತು.

'ನಿಮ್ಮ ಆಫರ್‌ಗೆ ಆಸೆಬಿದ್ದು ಈ ಡೈರಿ ಕೊಟ್ಟಿರೋದಲ್ಲ. ಹೆದ್ರಿಕೊಳ್ವಷ್ಟು ಪವರ್ ನಿಮ್ಮತ್ರ ಈಗ ಇಲ್ಲ. ಆದ್ರೆ ನ್ಯೂಸ್ ಹೆಸ್ರಲ್ಲಿ ನಿಮ್ಮ ಖಾಸಗಿ ಬದುಕಿನ ವಿವರಗಳು ಜಗಜ್ಜಾಹೀರು ಆಗೋದು ಸರಿಯಲ್ಲ. ತಪ್ಪು ಮಾಡಿದ ವ್ಯಕ್ತಿಗೆ ಅವನು ಮಾಡಿದ ತಪ್ಪಿಗೇ ಶಿಕ್ಷೆ ಆಗಬೇಕೇ ಹೊರತು ಬೇರೆ ಯಾವುದೋ ಕಾರಣಕ್ಕೆ ಅಲ್ಲ ಅನ್ನೋದು ನನ್ನ ನಂಬ್ಕೆ. ಈ ಡೈರಿ ಔಟ್ ಆದ್ರೆ ನೀವೊಬ್ರೇ ಅಲ್ಲ, ನಿಮ್ ಜೊತೆಗೆ ತಪ್ಪು ಮಾಡಿಲ್ದಿರೋರೂ ಇನ್ನೆಷ್ಟೋ ಜನ ಶಿಕ್ಷೆ ಅನುಭವಿಸ ಬೇಕಾಗತ್ತೆ. ಹಾಗಾಗಿ ಇದನ್ನು ನಮ್ ಆಫೀಸಿಗೂ ಕೊಡ್ದೆ ಉಳಿಸ್ಕೊಂಡಿದೀನಿ. ಇನ್ಮೇಲಾದ್ರೂ ನಿಮ್ ಖಾಸಗಿತನವನ್ನು ಖಾಸಗಿಯಾಗೇ ಇಟ್ಕೊಳ್ಳಿ' ಎಂದು ಹೊರಹೊರಟಳು.

ರಂಗಾ ನಾಯಕ್ ದಬಕ್ಕನೇ ಆ ಡೈರಿಯನ್ನು ಎತ್ತಿ ಹಿಡಿದುಕೊಂಡು ಎದ್ದು ನಿಂತರು. ಒಣಗಿದ ಗಂಟಲಲ್ಲೇ ಕಷ್ಟಪಟ್ಟು, 'ನಿಮ್ ಹೆಸ್ರು ಗೊತ್ತಾಗ್ಲಿಲ್ಲ' ಕೇಳಿದರು. ಅವರಿಗೆ ಗೊತ್ತಿಲ್ಲದೆಯೇ ಅವರ ಬಾಯಲ್ಲಿ ಬಹುವಚನ ಬಂದಿತ್ತು. ಹುಡುಗಿ ನಿಂತು ತಿರುಗಿದಳು. ಮತ್ತೊಮ್ಮೆ ನಕ್ಕು, 'ಸ್ನೇಹಕುಮಾರಿ' ಅಂದಳು. ಮತ್ತೆರಡು ಹೆಜ್ಜೆ ಮುಂದೆ ಬಂದು ಅವರ ಕಣ್ಣುಗಳನ್ನೇ ದಿಟ್ಟಿಸುತ್ತ, 'ನನ್ನಮ್ಮನ ಹೆಸರು ಮೀನಾಕುಮಾರಿ' ಎಂದು ಸರಸರನೇ ತಿರುಗಿ ಹೊರಟುಬಿಟ್ಟಳು.

ಆ ಹೆಸರು ಕೇಳಿದ್ದೇ ರಂಗಾ ನಾಯಕ್ ಮೈಯಲ್ಲಿ ಚಿಲ್ಲನೆ ಬೆವರಿನ ಸೆಲೆ ಒಡೆಯಿತು. ಹಣೆಯ ಮೇಲೆ ನರವುಬ್ಬಿ ಹೊಡೆದುಕೊಳ್ಳತೊಡಗಿತು. ಕೈಯಲ್ಲಿದ್ದ ಡೈರಿಯ ಯಾವುದೋ ಪುಟ ಬೆವರಿನಿಂದ ತೋಯತೊಡಗಿತು.

ಪ್ರತಿಕ್ರಿಯಿಸಿ: feedback@sudha.co.in